ಶ್ರೀ ಪಿ. ಬಿ. ಓಂಕಾರ ಮೂರ್ತಿ.—ಕಡೂರು ತಾಲ್ಲೂಕಿನಲ್ಲಿ ಸುಮಾರು ೩೦-೩೬ ಹೈಸ್ಕೂಲುಗಳಿವೆ. ಅದರಲ್ಲಿ ಸರ್ಕಾರಿ ಹೈಸ್ಕೂಲುಗಳೇ ಜಾಸ್ತಿ. ಚೌಳಿ ಹಿರಿಯೂರು, ಯಗಟಿ ಮತ್ತು ಖಿದರ ಗ್ರಾಮದಲ್ಲಿ ಗೌರ್ನಮೆಂಟ್ ಹೈಸ್ಕೂಲುಗಳು ಪ್ರಾರಂಭವಾಗಿ ೨೫ ವರ್ಷಗಳಾಯಿತು. ಆದರೆ ಇಲ್ಲಿಯವರೆಗೂ ಅಲ್ಲಿ ವಿದ್ಯಾರ್ಥಿನಿಲಯಗಳಿಲ್ಲ. ಒಂದೆರಡು ವರ್ಷದಿಂದ ಇರತಕ್ಕ ಜಾಗದಲ್ಲಿ ವಿದ್ಯಾರ್ಥಿ ನಿಲಯಗಳನ್ನು ಮಂಜೂರು ಮಾಡುತ್ತಿದ್ದೀರಿ. ಮುಂದಿನ ಸಾಲಿನಿಂದ ಆದರೂ ಸರ್ಕಾರಿ ಹೈಸ್ಕೂಲುಗಳು ಇರುವ ಕಡೆಗಳಲ್ಲಿ ವಿದ್ಯಾರ್ಥಿ ನಿಲಯ ಸ್ಥಾಪನೆ ಮಾಡುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೆ, ಕಡೂರು ತಾಲ್ಲೂಕಿನಲ್ಲಿ ೩೬ ಹೈಸ್ಕೂಲುಗಳಿವೆ. ೨೨ ವಿದ್ಯಾರ್ಥಿ ನಿಲಯಗಳಿವೆ. ಹೈಸ್ಕೂಲು ಇದ್ದಲ್ಲಿ ವಿದ್ಯಾರ್ಥಿ ನಿಲಯ ಇರಬೇಕಾದದ್ದು ಅವಶ್ಯಕ. ಅದರಂತೆ ಸಾಕಷ್ಟು ವಿದ್ಯಾರ್ಥಿ ನಿಲಯಗಳನ್ನು ಮಂಜೂರು ಮಾಡಿದ್ದೇವೆ. ಮಾನ್ಯ ಸದಸ್ಯರ ಬೇಡಿಕೆಯನ್ನು ಮುಂದಿನವರ್ಷ ಪರಿಶೀಲಿಸುತ್ತೇವೆ. ಚೌಳಿ ಹಿರಿಯೂರು ಮತ್ತು ಯಗಟಿ ಗ್ರಾಮಗಳಿಂದ ಅರ್ಜಿ ಬಂದಿದೆ. ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ. ಖಿದರಿ ಯಿಂದ ಅರ್ಜಿ ಯಾವುದೂ ಬಂದಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಎ. ಕೃಷ್ಣಪ್ಪನವರ ಪ್ರಶ್ನೆ ಬೇರೆ ಗ್ರೂಪ್‌ಗೆ ಟ್ರಾನ್ಸ್‌ಫರ್ ಆಗಿದೆ. ಉತ್ತರ ಕೊಡಿಸುತ್ತೇನೆ.

ಶ್ರೀ ಎ. ಕೃಷ್ಣಪ್ಪ.—ನಾನು ೧೦೨ನೇ ಪ್ರಶ್ನೆ ಕೇಳುತ್ತೇನೆ.

ಅಧ್ಯಕ್ಷರು.—ಅದು ಬೇರೆ ಗ್ರೂಪ್‌ಗೆ ಹೋಗಿದೆ. ನಂತರ ಉತ್ತರ ಕೊಡಿಸುತ್ತೇನೆ.

ಕೊಡಗು ಜಿಲ್ಲೆಯಲ್ಲಿ ಸುಂಗಾರು ಮಳೆಯ ಬಗ್ಗೆ

೯೫ (೧೭೯) ಶ್ರೀ ಡಿ. ಎ. ಚಿನ್ನಪ್ಪ (ಮಡಿಕೇರಿ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಕೊಡಗು ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಮುಂಗಾರು ಮಳೆಯು ಪೂರ್ತಿಯಾಗಿ ವಿಫಲ ವಾಗಿರುವುದು ನಿಜವೇ ?

ಆ) ಹಾಗಿದ್ದಲ್ಲಿ, ಜಿಲ್ಲಾಧಿಕಾರಿಗಳು ಈ ವಿಷಯ ಕುರಿತು ಸರ್ಕಾರಕ್ಕೆ ವರದಿ ಸಲ್ಲಿಸುವರೇ ?

ಇ) ಹಾಗೂ, ಜಿಲ್ಲಾ ಪರಿಷತ್ತು ಸಹ ಅದೇ ರೀತಿ ಸದರೀ ವಿಷಯ ಕುರಿತು, ವರದಿ ಸಲ್ಲಿಸಿರುತ್ತದೆಯೇ ?

ಈ) ಹಾಗಿದ್ದಲ್ಲಿ, ಸದರೀ ವರದಿಗಳು ಕುರಿತು ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು ?

ಉ) ಸರ್ಕಾರವು ಕೊಡಗು ಜಿಲ್ಲೆಯನ್ನು ಅಭಾವ ಪೀಡಿತ ಪ್ರದೇಶವೆಂದು ಘೋಷಿಸಲು ಹಾಗೂ ಕೊಡಗಿನ ಜನಾಂಗಕ್ಕೆ ಎಲ್ಲಾ ಅನುಕೂಲಗಳನ್ನು ಒದಗಿಸಲು ಉದ್ದೇಶಿಸಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಸಚಿವರು).—

ಅ) ಹೌದು.

ಆ) ಹೌದು.

ಇ) ಇಲ್ಲ.

ಈ) ಬರಪೀಡಿತ ಎಂದು ಗುರುತಿಸಿದ ಕೊಡಗು ಜಿಲ್ಲೆಯ ಮೂರು ತಾಲ್ಲೂಕುಗಳಲ್ಲಿ (ಅಂದರೆ ಮಡಿಕೇರಿ, ಸೋಮವಾರಪೇಟೆ ಮತ್ತು ವಿರಾಜಪೇಟೆ) ಸರ್ಕಾರವು ಈ ಕೆಳಕಂಡ ಬರಪರಿಹಾರ ಕಾರ್ಯಕ್ರಮಗಳನ್ನು ಕೈಗೊಂಡಿದೆ.

೧. ಉದ್ಯೋಗ ಅರಸಿ ಬಂದವರಿಗೆ ಉದ್ಯೋಗ ನೀಡುವುದು.

೨. ರೈತರಿಗೆ ಕೃಷಿ ಸಾಮಗ್ರಿ ಚೀಲಗಳನ್ನು (ಮಿನಿ ಕಿಟ್ಸ್) ಒದಗಿಸುವುದು.

೩. ಕುಡಿಯುವ ನೀರಿನ ಅಭಾವವಿರುವಡೆಯಲ್ಲಿ ಅದನ್ನು ಒದಗಿಸುವುದು.

೪. ಮೇವು ಸರಬರಾಜು ಮಾಡುವುದು.

ಉ) ಕೊಡಗು ಜಿಲ್ಲೆಯನ್ನು ಈಗಾಗಲೇ ಅಭಾವ ಪೀಡಿತವೆಂದು ಗುರುತಿಸಲಾಗಿದೆ. ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಅನುವಾಗುವಂತೆ ಸಾಕಷ್ಟು ಹಣವನ್ನು ಕೂಡ ಬಿಡುಗಡೆ ಮಾಡಿದ್ದು ಮೇಲೆ (ಈ)ಗೆ ನೀಡಿದ ಉತ್ತರದಲ್ಲಿ ನಮೂದಿಸಿದ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ವೀರಣ್ಣ (ಕಂದಾಯ ಸಚಿವರ ಪರವಾಗಿ).—ಈಗಾಗಲೇ ಕೊಡಗು ಜಿಲ್ಲೆಗೆ ಏಪ್ರಿಲ್ ತಿಂಗಳಿಂದ ೩೯ ಲಕ್ಷ ರೂಪಾಯಿ ಹಣವನ್ನು ಎಲ್ಲಾ ಕಾರ್ಯಕ್ರಮಗಳಿಗೆ ಬಿಡುಗಡೆ ಮಾಡಿದ್ದೇವೆ.

ಶ್ರೀ ಡಿ. ಎ. ಚಿನ್ನಪ್ಪ.—ಅಧ್ಯಕ್ಷರೆ, ಸ್ಕೇರ್ಸಿಟಿ ರಿಪೋರ್ಟಿನಲ್ಲಿ ಕೊಡಗು ಜಿಲ್ಲೆಯಲ್ಲಿ ಮಡಿಕೇರಿ ವಿರಾಜಪೇಟೆ ಮತ್ತು ಸೋಮವಾರಪೇಟೆ ತಾಲ್ಲೂಕಿನಲ್ಲಿ ಹೆಚ್ಚು ಗ್ರಾಮಗಳು ಬರಗಾಲಕ್ಕೆ ಒಳಗಾಗಿವೆ ಎಂದು ಹೇಳಿದ್ದಾರೆ. ಈ ರಿಪೋರ್ಟಿನಲ್ಲಿ ಮಡಿಕೇರಿ ತಾಲ್ಲೂಕಿನಲ್ಲಿ ೬೮ ಗ್ರಾಮಗಳು, ಸೋಮವಾರಪೇಟೆ ತಾಲ್ಲೂಕಿನಲ್ಲಿ ೨೪೮ ಗ್ರಾಮಗಳು ಮತ್ತು ವಿರಾಜಪೇಟೆ ತಾಲ್ಲೂಕಿನಲ್ಲಿ ೩೭ ಗ್ರಾಮಗಳು ಬರಗಾಲಕ್ಕೆ ಒಳಗಾಗಿವೆ ಎಂದು ಹೇಳಿದ್ದಾರೆ, ಈ ವರದಿ ಸರಿಯಲ್ಲ ಎಂದು ಹೇಳುತ್ತಿದ್ದೇನೆ. ಆಮೇಲೆ ೩೯ ಲಕ್ಷ ರೂಪಾಯಿಗಳನ್ನು ಏನು ರಿಲೀಸ್ ಮಾಡಿದ್ದಾರೆ ಅದನ್ನು ಜಿಲ್ಲಾ ಪರಿಷತ್ತಿಗೆ ಕೊಟ್ಟಿದ್ದಾರೋ ಅಥವಾ ಡೆಪ್ಯುಟಿ ಕಮಿಷನರ್‌ಗೆ ಕೊಟ್ಟಿದ್ದಾರೋ ಎಂದು ಕೇಳುತ್ತಿದ್ದೇನೆ.

ಶ್ರೀ ವೀರಣ್ಣ.—೩೯ ಲಕ್ಷ ರೂಪಾಯಿಗಳ ಹಣವನ್ನು ಆಯಾ ಇಲಾಖೆಗೆ ಸಂಬಂಧಪಟ್ಟಂತೆ ರಿಲೀಸ್ ಮಾಡಿರುತ್ತೇವೆ. ಗ್ರಾಮೀಣ ಉದ್ಯೋಗ ಭರವಸೆ ಕೆಳಗೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಜಿಲ್ಲಾ ಪರಿಷತ್ತಿಗೆ ಕೊಡುತ್ತೇವೆ. ಮೇವಿಗಾಗಿ ಕಾರ್ಯಕ್ರಮಕ್ಕೆ ಜಿಲ್ಲಾ ಪರಿಷತ್ತಿಗೆ ರಿಲೀಸ್ ಮಾಡಿರುತ್ತೇವೆ. ಈಗಾಗಲೇ ಇಡೀ ಕೊಡಗು ಜಿಲ್ಲೆಯಲ್ಲಿ ೩೫೫ ಹಳ್ಳಿಗಳನ್ನು ಬರಪೀಡಿತ ಪ್ರದೇಶವೆಂದು ಘೋಷಿಸಲಾಗಿದೆ. ಮಡಿಕೇರಿಯಲ್ಲಿ ೬೮ ಹಳ್ಳಿಗಳು ಸೋಮವಾರಪೇಟೆಯಲ್ಲಿ ೨೪೯ ಹಳ್ಳಿಗಳು, ವಿರಾಜಪೇಟೆಯಲ್ಲಿ ೩೭ ಹಳ್ಳಿಗಳು ಬರಗಾಲಕ್ಕೆ ಸಿಕ್ಕಿವೆ. ಕೊಡಗು ಜಿಲ್ಲೆಯನ್ನು ಈಗಾಗಲೇ ಅಭಾವ ಪೀಡಿತ ಪ್ರದೇಶವೆಂದು ಗುರುತಿಸಲಾಗಿದೆ ಎಂದು ಹೇಳಿದ್ದೇನೆ. ಬರಪರಿಹಾರ ಕಾರ್ಯಕ್ರಮದಲ್ಲಿ ಏನೇನು ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯ ಆ ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕೆ ಸರ್ಕಾರ ಸಿದ್ಧವಿದೆ.

ಶ್ರೀ ಡಿ. ಎ. ಚಿನ್ನಪ್ಪ.—ಬರಪೀಡಿತ ಪ್ರದೇಶದಲ್ಲಿ ಈಗಾಗಲೇ ಆಸಿಸ್ಟೆಂಟ್ ಕಮಿಷನರ್‌ರವರು ಇರಿಗೇಷನ್ ಟ್ಯಾಕ್ಸನ್ನು ವಸೂಲಿ ಮಾಡುವುದಕ್ಕೆ ನೋಟೀಸ್ ಕೊಟ್ಟಿದ್ದಾರೆ. ಮನೆಯನ್ನು ಜಪ್ತಿ ಮಾಡುವುದಕ್ಕೂ ಹೇಳುತ್ತಿದ್ದಾರೆ. ಅದರ ಬಗ್ಗೆ ತಾವು ಏನು ಹೇಳುತ್ತೀರಿ?

ಶ್ರೀ ವೀರಣ್ಣ.—ಮಾನ್ಯ ಕಂದಾಯ ಮಂತ್ರಿಗಳು ಇದೇ ವಿಧಾನಸಭೆಯಲ್ಲೇ ಹೇಳಿದ್ದಾರೆ. ೨ ತಿಂಗಳ ಕಾಲ ಯಾವುದೇ ರೀತಿಯ ಸಾಲವನ್ನು ವಸೂಲು ಮಾಡದೆ ಇರುವುದಕ್ಕೆ ಸೂಚನೆ ಕೊಟ್ಟಿದ್ದೇನೆ ಎಂದು.

ಶ್ರೀ ಡಿ. ಎ. ಚಿನ್ನಪ್ಪ.—ಇರಿಗೇಷನ್ ಟ್ಯಾಕ್ಸನ್ನು ವಸೂಲಿ ಮಾಡುವುದಕ್ಕೆ ಪ್ರಯತ್ನ ನಡೆಯುತ್ತಿದೆ. ಕಳೆದ ೩ ವರ್ಷಗಳಿಂದ ಆ ಪ್ರದೇಶದಲ್ಲೆಲ್ಲಾ ಬರಗಾಲವಿದ್ದು, ಕೆರೆಗಳಲ್ಲಿ ನೀರೇ ಇಲ್ಲ. ಯಾವುದೇ ಬೆಳೆಯನ್ನು ಬೆಳೆದಿಲ್ಲ. ಆದರೂ ವಾಟರ್‌ಟ್ಯಾಕ್ಸನ್ನು ವಸೂಲಿ ಮಾಡುವುದಕ್ಕೆ ಪ್ರಯತ್ನ ನಡೆಯುತ್ತಿದೆ. ಇದನ್ನು ನಿಲ್ಲಿಸುತ್ತೀರಾ?

ಶ್ರೀ ವೀರಣ್ಣ.—ವಾಟರ್‌ಟ್ಯಾಕ್ಸ್ ಬಗ್ಗೆ ಮಾನ್ಯ ಸದಸ್ಯರಾದ ಚಿನ್ನಪ್ಪನವರು ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಅಧಿಕಾರಿಗಳಿಂದ ವರದಿಯನ್ನು ತರಿಸಿಕೊಳ್ಳುತ್ತೇವೆ. ಎಲ್ಲೆಲ್ಲಿ ಅಭಾವ ಪೀಡಿತ ಪ್ರದೇಶವಾಗಿದೆ, ಎಲ್ಲಿ ರೈತರು ಬೆಳೆಯನ್ನು ಬೆಳೆದಿಲ್ಲವೋ, ನೀರಿನ ಅಭಾವದಿಂದ ಅಂತಹ ಕಡೆ ವಾಟರ್ ಟ್ಯಾಕ್ಸನ್ನು ವಸೂಲು ಮಾಡುವಂತಹ ಪ್ರಶ್ನೆಯೇ ಬರುವುದಿಲ್ಲ. ಆದರೆ ಎಲ್ಲಿ ನೀರನ್ನು ಉಪಯೋಗ ಮಾಡಿಕೊಂಡು ಬೆಳೆಯನ್ನು ಬೆಳೆದಿದ್ದಾರೆ, ಅಂತಹವರೂ ಕೂಡ ವಾಟರ್‌ಟ್ಯಾಕ್ಸನ್ನು ಕೊಡುವುದನ್ನು ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎನ್ನುತಕ್ಕ ಮಾತನ್ನು ನಾನು ಹೇಳುತ್ತಿದ್ದೇನೆ.

ದಕ್ಷಿಣ ಕನ್ನಡ ಜಿಲ್ಲೆಯ ಉಗ್ರಾಣಿಗಳ ಮಾಸಿಕ ವೇತನದ ಬಗ್ಗೆ

೯೬ (೨೬೬) ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಕಂದಾಯ ಮತ್ತು ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಉಗ್ರಾಣಿಗಳು ಇದ್ದಾರೆ?